ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಹೋಂ ಮಿನಿಸ್ಟರ್ ಹೋಗಲಿ, ನಾವು ಅವರೇ ಇರಬೇಕೆಂದು ಒತ್ತಾಯ ಮಾಡುತ್ತಿಲ್ಲ. ಇಲ್ಲಿ ಯಾರಿಗಾದರೂ ಮಂತ್ರಿಯವರಿಗೆ ಹೇಳಿ ಪ್ರತಿಯನ್ನು ಓದುತ್ತಿದ್ದರು. ಈಗ ಅವರು ಬಂದಮೇಲೆ ನಮಗೆ ಆ ಮಾಹಿತಿಯನ್ನು ಒದಗಿಸಿ ಕೊಡಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಗೃಹ ಮಂತ್ರಿಗಳು ಹೇಳಿಕೆ ಕೊಡಲು ತಯಾರಿದ್ದರೆ ಅದನ್ನು ಕೊಡಿಸುವಂಥಾದ್ದಕ್ಕೆ ಪ್ರಯತ್ನಿಸುತ್ತೇನೆ, ಇಲ್ಲದಿದ್ದರೆ ನಾಳೆ, ನಾಡಿದ್ದು ಹೇಳಿಕೆ ಕೊಡುವಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಇ) ನರಸಿಂಹರಾಜ ಕ್ಷೇತ್ರದಲ್ಲಿ ದಿನಾಂಕ: 17.3.99ರಂದು 100-150 ಗುಡಿಸಲುಗಳನ್ನು ನಗರ ಪಾಲಿಕೆಯವರು ನೆಲಸಮ ಮಾಡಿರುವುದು.

+ಶ್ರೀ ಇ .ಮಾರುತಿರಾವ್ ಪವಾರ್(ನರಸಿಂಹರಾಜ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 17-3-99ರಲಿದ್ದು ಇಲ್ಲಿ ಸದನ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಸುಮಾರು 100-150 ಗುಡಿಸಲುಗಳನ್ನು ನಗರಪಾಲಿಕೆಯವರು ನೆಲಸಮ ಮಾಡಿದ್ದಾರೆ. ಈಗ ಅವರು ನಿರಾಶ್ರಿತರಾಗುವಂತಹ ಪರಿಸ್ಥಿತಿ ಬಂದಿದೆ, ರಸ್ತೆಯಲ್ಲಿದ್ದಾರೆ, ಶೆಲ್ಟರ್ ಇಲ್ಲ. ಹಿಂದೆ ನಗರಾಭಿವೃದ್ಧಿ ಪ್ರಾಧಿಕಾರದವರು ಇದ್ದಂತಹ ಗುಡಿಸಲುಗಳಿಗೆ ನೀರು ಕೊಟ್ಟು, ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಇವರಿಗೆ ಈಗ ರಸ್ತೆಯಲ್ಲಿರುವಂತಹ ಪರಿಸ್ಥಿತಿಯಾಗಿದೆ. ಅದಕ್ಕಾಗಿ ಸರ್ಕಾರದವರು ಏನು ಮಾಡುತ್ತಿದ್ದಾರೆಂಬ ಉತ್ತರ ಬೇಕು.

ಶ್ರೀ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ., ಇದಕ್ಕೆ ನಾವು ವರದಿಯನ್ನು ತರಿಸಿ ಹೇಳಿಕೆ ಮಾಡುತ್ತೇವೆ. ಈಗ ಮಾನ್ಯ ವಿರೋಧಪಕ್ಷದವರು ಪ್ರಸ್ತಾಪ ಮಾಡಿದಂತಹ ವಿಚಾರಕ್ಕೆ ವರದಿ ಬಂದಿದೆ: ಅದನ್ನು ಕೊಡುತ್ತೇನೆ. ರಾಯಚೂರು ಜಿಲ್ಲೆಯ ಜಾಲಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯೆ ವಾಚನಾಯಕ ತಾಂಡಾದಲ್ಲಿ ಶಿವಪ್ಪ ಎಂಬುವರ ಮನೆಯನ್ನು ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕು ನಾವಗಿ ಗ್ರಾಮದ ಗರುಡ ಗೌಡ ಪಾಟೀಲ್ ಎಂಬುವರು ಸುಮಾರು ಒಂದು ವರ್ಷದ ಹಿಂದೆ ಬಾಡಿಗೆಗೆ ಪಡೆದುಕೊಂಡಿರುತ್ತಾರೆ. ಗರುಡನಗೌಡ ಪಾಟೀಲರು 4-5 ಜನರು ಸದರಿ ಮನೆಯಲ್ಲಿ ವಾಸವಾಗಿದ್ದು, ನಾರಾಯಣಪುರ ಬಲದಂತೆ ಕಾಲುವೆ ಕೆಲಸದಲ್ಲಿ ಗ್ರಾನೈಟ್ ಕಲ್ಲನ್ನು ಸ್ಫೋಟಿಸಲು ಉಪಯೋಗಿಸುವ ಜಿಲೆಟಿನ್ ಮುಂತಾದ ಸ್ಫೋಟಕ ಸಾಮಗ್ರಿಗಳನ್ನು ಶೇಖರಿಸಿದ್ದರು. ಸದರಿ ಸ್ಫೋಟಕ ಸಾಮಗ್ರಿಗಳನ್ನು ಅನಧಿಕೃತವಾಗಿ ಹಾಗೂ ಯಾವುದೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳದೆ ಇಟ್ಟುಕೊಂಡಿದ್ದರು. ದಿನಾಂಕ: 10-3-99ರಂದು ಬೆಳಿಗ್ಗೆ 8 ಗಂಟೆಯ ಸುಮಾರಿಗೆ ಆ ಮನೆಯಲ್ಲಿ ಸ್ಫೋಟಗೊಂಡು ಚನ್ನಮ್ಮ ಕೋಂ ಶಿವಪ್ಪ ಲಮಾಣಿ, (35ವರ್ಷ) ಕೃಷ್ಣಪ್ಪನ ತಂದೆ ಮಹದೇವಪ್ಪ(35ವರ್ಷ) ನಬ(35ವರ್ಷ) ಆರೋಪಿತರು ಸ್ಥಳದಲ್ಲಿ ಮೃತಪಟ್ಟದ್ದಾರೆ. ಈ ಕೆಳಗಿನ 7 ಜನರು ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 1.ಶಿವಪ್ಪನ ತಂದೆ ಮೂಕಪ್ಪ(31ವರ್ಷ) 2.ಬಾಲಯ್ಯನ ತಂದೆ ರಾಮಲಿಂಗಪ್ಪ (28ವರ್ಷ) 3.ಮಲ್ಲಪ್ಪನ ತಂದೆ ಮಡಿವಾಳಪ್ಪ(40ವರ್ಷ) 4.ಶಿವಮ್ಮ ಕೋಂ ಹನುಮಂತಪ್ಪ(28ವರ್ಷ), 5. ಸೀತಮ್ಮನ ತಂದೆ ಕೋಮಣ್ಣ 6. ರತ್ನಮ್ಮ ಕೋಂ ಶಂಕರಪ್ಪ(40ವರ್ಷ) 7.ಇನ್ನೊಬ್ಬರು. ಈ ಘಟನೆಯಲ್ಲಿ ಒಂದು ಎತ್ತು, ಒಂದು ದನ, ಒಂದು ಆಡು ಕೂಡ ಸತ್ತಿರುತ್ತವೆ. ಹನುಮಂತಪ್ಪ ಎಂಬ ಇನ್ನೊಬ್ಬ ವ್ಯಕ್ತಿ ನಾಪತ್ತೆಯಾಗಿರುತ್ತಾನೆ. ಮೇಲ್ಕಂಡ ಘಟನೆಗೆ ಸಂಬಂಧಿಸಿದಂತೆ ಜಾಲಹಳ್ಳಿ ಪೋಲೀಸ್

ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:21:99 ಕಲಂ 286-304(ಎ) ಐಪಿಸಿ 9(ಬಿ), ಭಾರತೀಯ ಸ್ಫೋಟಕ ವಸ್ತುಗಳ ಕಾಯಿದೆ 1884 ಮತ್ತು 3,4,5 ಮತ್ತು 6 ಭಾರತೀಯ ಸ್ಫೋಟಕ ವಸ್ತುಗಳ ಕಾಯಿದೆ 1908 ಗರುಡಗೌಡ ಪಾಟೀಲ್‌ಮತ್ತು ಇತರೆ 6 ಜನರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮುಖ್ಯ ಆರೋಪಿ ಗರುಡನಗೌಡ ಪಾಟೀಲ್ ತಲೆ ಮರೆಸಿಕೊಂಡಿದ್ದು ಪತ್ತೆ ಕಾರ್ಯ ಮುಂದುವರೆದಿದೆ.

ಶ್ರೀ ಇ. ಮಾರುತಿರಾವ್ ಪವಾರ್: ಮಾನ್ಯ ಉಪಾಧ್ಯಕ್ಷರೆ, ನಾನು ಮೊನ್ನೆ ವಿಷಯ ಕೇಳಿದ್ದೇನೆ. ಇವರು ಉತ್ತರವನ್ನು ತರಿಸಿ ಕೊಡುತ್ತೇನೆಂದು ಹೇಳಿದ್ದರು. ಅಲ್ಲಿ ಜನರು ಆಶ್ರಯವಿಲ್ಲದೆ, ಊಟ ಇಲ್ಲದೆ, ರಸ್ತೆಯಲ್ಲಿದ್ದಾರೆ. ಸರ್ಕಾರ ಈ ರೀತಿಯಾಗಿ ಉತ್ತರ ಕೊಟ್ಟರೆ ನಾವು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ನಾವು ಉತ್ತರವನ್ನು ತರಿಸಿಕೊಡುವಂಥ ಪ್ರಯತ್ನ ಮಾಡುತ್ತೇವೆ.

ಈ) ಕರ್ನಾಟಕದಲ್ಲಿ ಅರೆಕಾಲಿಕ ಶಿಕ್ಷಕರನ್ನು ಖಾಯಂ ಮಾಡುವುದು.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅರೆಕಾಲಿಕ ನಾಮಾಂಕಿತದ ಪೂರ್ಣಕಾಲಿಕ ಹುದ್ದೆಯಲ್ಲಿ ಸುಮಾರು 654 ಜನ ಶಿಕ್ಷಕರು ಇದ್ದಾರೆ. ಸುಮಾರು 15 ಜಿಲ್ಲೆಗಳಲ್ಲಿ 15-20-40 ಕೆಲವು ಕಡೆ 144ಶಿಕ್ಷಕರ ನೇಮಕಾತಿಯಾಗಿದೆ. ಅವರಿಗೆ ಪೂರ್ಣಪ್ರಮಾಣದಲ್ಲಿ ರಾಜ್ಯ ಸರ್ಕಾರ ಸಂಬಳವನ್ನು ಕೊಡುತ್ತಿದೆ. ಕಳೆದ 15 ವರ್ಷಗಳಿಂದ ಇವರು ದುಡಿಯುತ್ತಿದ್ದು ಇವರನ್ನು ಇನ್ನೂ ಖಾಯಂ ಮಾಡಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯ ರಾಜ್ಯ ಸರ್ಕಾರಕ್ಕೆ ಆದೇಶವನ್ನು ನೀಡಿದೆ. ಆದರೆ 1997 ಏಪ್ರಿಲ್ ತಿಂಗಳಲ್ಲಿ ರಾಜ್ಯ ಸಚಿವ ಸಂಪುಟವು ಖಾಯಂಗೊಳಿಸುವ ನಿರ್ಧಾರವನ್ನು ತೆಗೆದುಕೊಂಡಿದೆ. ಇದು ಇನ್ನು ಪಾಲನೆಯಾಗಿಲ್ಲ. ಇದರಿಂದ ಅವರ ಸರ್ವೀಸ್, ಇನ್‌ಕ್ರಿಮೆಂಟ್, ಅರ್ನ್‌ಲೀವ್, ಹೆರಿಗೆ ಸೌಲಭ್ಯಗಳಿಲ್ಲದೇ ಈ ಶಿಕ್ಷಕರುಗಳಿಗೆ ತೊಂದರೆಯಾಗಿದೆ. ನಾನು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಅವರುಗಳನ್ನು ಯಾವಾಗ ಖಾಯಂ ಮಾಡುತ್ತೀರಿ, ಇಲ್ಲ ಖಾಯಂ ಗೊಳಿಸುವುದಿಲ್ಲವೇ? ಇವರನ್ನು ಖಾಯಂಗೊಳಿಸದಿದ್ದರೆ ಈ ಆಜ್ಞೆಯನ್ನು ಯಾವಾಗ ಜಾರಿಗೆ ತರುತ್ತೀರಿ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಪ್ರೌಢ ಶಾಲೆಗಳಲ್ಲಿನ ಅರೆಕಾಲಿಕ ಶಿಕ್ಷಕರನ್ನು ಖಾಯಂ ಮಾಡಲು ಸರ್ಕಾರ ಯೋಚಿಸಿತ್ತು, ಆದರೆ ಅರೆಕಾಲಿಕ ಉಪನ್ಯಾಸಕರ ಖಾಯಂ ಮಾಡುವ ಬಗ್ಗೆ ಇತ್ತೀಚೆಗೆ ರಾಜ್ಯದ ಉಚ್ಚನ್ಯಾಯಾಲಯ ತೀರ್ಪು ನೀಡಿ ಇದನ್ನು ಹಿಂಬಾಗಿಲಿನಿಂದ ಬರುವ ಕ್ರಮವೆಂದು ದೂರಿ ಕೆ.ಎಟಿ. ನೀಡಿದ ತೀರ್ಪನ್ನು ಎತ್ತಿ ಹಿಡಿದು ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡಬಾರದೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಈ ಅರೆಕಾಲಿಕ ಶಿಕ್ಷಕರನ್ನು ಖಾಯಂ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ಅವರುಗಳಿಗೆ ನೇಮಕಾತಿ ಸಮಯದಲ್ಲಿ ನೀಡಲಾಗುತ್ತಿರುವ ಶೇ.2 ಕೃಪಾಂಕವನ್ನು ಹೆಚ್ಚಿಸಿ ಅನುಕೂಲ ಮಾಡಿಕೊಡಲು ಪರಿಶೀಲಿಸಲಾಗುತ್ತಿದೆ.